# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯದ ಗ್ರಾಮ ಪಂಚಾಯಿತಿ ಶಾಖೆಯಲ್ಲಿ ನಿಯೋಜನೆ ಮೇಲೆ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ.ಎನ್. ಮಂಜುನಾಥ್, ರೇಷ್ಮೆ ನಿರೀಕ್ಷಕರು, ಇವರ ಮೇಲಿನ ಆರೋಪದ ಕುರಿತು.

ಓದಲಾಗಿದೆ:
1)ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 398 ಕೆಎಸ್ಎಸ್ 2014 ದಿನಾಂಕ 09.12.2014.
2)ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 398 ಕೆಎಸ್ಎಸ್ 2014 ದಿನಾಂಕ 18.03.2015.
3)ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 22 ಗ್ರಾಪಂಕಾ 2015 ದಿನಾಂಕ 09.08.2016.
4)ರೇಷ್ಮೆ ಅಭಿವೃದ್ಧಿ ಆಯುಕ್ತರು, ಬೆಂಗಳೂರು ಇವರ ಜ್ಞಾಪನ ಪತ್ರ ದಿನಾಂಕ 8.11.2016.
5)ಶ್ರೀ ಕೆ.ಎನ್.ಮಂಜುನಾಥ್, ಪ್ರದಸ. ಇವರು ದಿನಾಂಕ ದಿನಾಂಕ 05.01.2015, 06.02.2017 ಮತ್ತು 30.05.2017ರ ಮನವಿಗಳು.
6)ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 156 ಕೆಎಸ್ಎಸ್ 2017 ದಿನಾಂಕ 30.10.2017.
7)ಶ್ರೀ ಕೆ.ಎನ್.ಮಂಜುನಾಥ್, ಪ್ರದಸ. ಇವರ ಮನವಿ ದಿನಾಂಕ 8.11.2017.

:—:

**ಪ್ರಸ್ತಾವನೆ:-**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ.ಎನ್. ಮಂಜುನಾಥ್, ರೇಷ್ಮೆ ನಿರೀಕ್ಷಕರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ನಿಯೋಜನೆ ಮೇಲೆ ಗ್ರಾಮ ಪಂಚಾಯಿತಿ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಕಾರ್ಯಾವಧಿಯಲ್ಲಿ, ಗ್ರಾಮ ಪಂಚಾಯಿತಿ ಸದಸ್ಯರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 43(a) ರನ್ವಯ ಕ್ರಮ ಜರುಗಿಸುವ ಸಂಬಂಧ ಕಾರ್ಯದರ್ಶಿ (ಪಂ.ರಾಜ್) ಇವರ ಸಮ್ಮುಖದಲ್ಲಿ ನಡೆಯುವ ವಿಚಾರಣೆಗೆ ಸಂಬಂಧಿಸಿದಂತೆ ಸದರಿ ನೌಕರರು ಕಾರ್ಯದರ್ಶಿ (ಪಂ.ರಾಜ್)ಇವರ ಸಮಕ್ಷಮದಲ್ಲಿ ನಡೆಯುವ ವಿಚಾರಣೆಗಳಲ್ಲಿ ಕಡತಗಳನ್ನು ಉದ್ದೇಶ ಪೂರ್ವಕವಾಗಿ ಮೇಲಾಧಿಕಾರಿಗಳ ಆದೇಶಕ್ಕೆ ಸಲ್ಲಿಸದೇ ಇರುವುದು, ಆಪಾದಿತ ವ್ಯಕ್ತಿಗಳ ಅನುಕೂಲಕ್ಕೆ ತಕ್ಕಂತೆ ಪ್ರಕರಣಗಳ ವಿಚಾರಣೆ ದಿನಾಂಕಗಳನ್ನು ನಿಗದಿಪಡಿಸಲು ಬಾಹ್ಯ ವ್ಯಕ್ತಿಗಳ ಒತ್ತಡಕ್ಕೆ ಮಣಿದು ಕಡತಗಳನ್ನು ಸಲ್ಲಿಸುವುದರ ಮೂಲಕ ಆಪಾದಿತರ ಜೊತೆ ಶಾಮೀಲಾಗಿ ದುರ್ನಡತೆ ಹಾಗೂ ಕರ್ತವ್ಯಲೋಪಗಳನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದ ಹಿನ್ನೆಲೆಯಲ್ಲಿ ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ಶ್ರೀ ಕೆ.ಎನ್.ಮಂಜುನಾಥ್, ಪ್ರಥಮ ದರ್ಜೆ ಸಹಾಯಕರು ಇವರನ್ನು ಉಲ್ಲೇಖ (1)ರಲ್ಲಿ ದಿನಾಂಕ 9.12.2014 ರಂದು ಇವರನ್ನು ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು. ತದನಂತರ ಓದಲಾದ (5) ರಲ್ಲಿನ ದಿನಾಂಕ 05.01.2015 ರಂದು ಸಲ್ಲಿಸಿದ್ದ ಶ್ರೀ ಕೆ.ಎನ್.ಮಂಜುನಾಥ್, ಪ್ರಥಮ ದರ್ಜೆ ಸಹಾಯಕ ಇವರ ಮನವಿಯನ್ನು ಪರಿಗಣಿಸಿ ಓದಲಾದ (2)ರ ದಿನಾಂಕ 18.05.2015 ರಂದು ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಿ ಇವರ ಸೇವೆಯನ್ನು ಮಾತೃ ಇಲಾಖೆಯಾದ ರೇಷ್ಮೆ ಇಲಾಖೆಗೆ ಹಿಂದಿರುಗಿಸಿದೆ.

ಶ್ರೀ ಕೆ.ಎನ್.ಮಂಜುನಾಥ್, ಪ್ರಥಮ ದರ್ಜೆ ಸಹಾಯಕರು ರವರ ವಿರುದ್ಧ ಆರೋಪಗಳಿಗೆ ಇಲಾಖಾ ವಿಚಾರಣೆ ನಡೆಸಿ ಸದರಿ ನೌಕರರ ಮೇಲಿನ ಆರೋಪ ಹಾಗೂ ಸಲ್ಲಿಸಿರುವ ಲಿಖಿತ ಉತ್ತರವನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಹಾಗೂ ಸರ್ಕಾರಿ ಕೆಲಸಕ್ಕೆ ಧಕ್ಕೆ ಉಂಟಾಗಿರುವುದಿಲ್ಲವೆಂದು ಕಂಡುಬಂದಿರುವುದರಿಂದ, ಶ್ರೀ ಕೆ.ಎನ್.ಮಂಜುನಾಥ್, ಪ್ರಥಮ ದರ್ಜೆ ಸಹಾಯಕರು ಇವರನ್ನು ಆರೋಪಗಳಿಂದ ದೋಷಮುಕ್ತ ಮಾಡಿರುವುದರಿಂದ ದಿನಾಂಕ 9.12.2014 ರಿಂದ 18.03.2015ರವರೆಗಿನ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸುವಂತೆ ಕೋರಿರುತ್ತಾರೆ.

ಸರ್ಕಾರವು ಶ್ರೀ ಕೆ.ಎನ್.ಮಂಜುನಾಥ್ ರವರ ಮನವಿಯನ್ನು ಪರಿಶೀಲಿಸಿದ್ದು, ಸರ್ಕಾರದ ಆದೇಶ ದಿನಾಂಕ 30.10.2017 ರಲ್ಲಿ ಶ್ರೀ ಕೆ.ಎನ್.ಮಂಜುನಾಥ್ ಇವರ ವಿರುದ್ಧದ ಆರೋಪಗಳಿಂದ ದೋಷಮುಕ್ತಗೊಳಿಸಿರುವುದರಿಂದ ಸದರಿಯವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 156 ಕೆಎಸ್ಎಸ್ 2017 ಬೆಂಗಳೂರು,**
**ದಿನಾಂಕ:18.01.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಕೆ.ಎನ್.ಮಂಜುನಾಥ್, ಪ್ರಥಮ ದರ್ಜೆ ಸಹಾಯಕರು ಇವರು ಹಿಂದಿನ ಗ್ರಾಮ ಪಂಚಾಯಿತಿ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ದಿನಾಂಕ 9.12.2014 ರಿಂದ 18.03.2015ರವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 100(3) ರಡಿಯಲ್ಲಿ ಕರ್ತವ್ಯದ ಮೇಲೆ ಕಳೆದ ಅವಧಿಯೆಂದು ಪರಿಗಣಿಸಿ, ಇವರನ್ನು ಅಮಾನತ್ತುಗೊಳಿಸದೇ ಇದ್ದಿದ್ದರೆ ಇವರು ಪಡೆಯಲು ಹಕ್ಕುಳ್ಳವರಾಗಿರುತ್ತಿದ್ದ ಪೂರ್ಣ ವೇತನ ಮತ್ತು ಇತರೆ ಭತ್ಯೆಗಳನ್ನು ಸಂದಾಯ ಮಾಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

19/1/18
(ಡಿ.ಎಸ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ & ಸಿ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿ:

1. ನಿರ್ದೇಶಕರು (ಪಂ.ರಾಜ್-1) ಹಾಗೂ (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ಕೃಷಿ ನಿರ್ದೇಶಕರ ಕಛೇರಿ, 5ನೇ ಮಹಡಿ ಬಹುಮಹಡಿಗಳ ಕಟ್ಟಡ, ಬೆಂಗಳೂರು-1
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ
4. ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
5. ಸಂಬಂಧಿಸಿದ ನೌಕರರು........ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ರವರ ಮುಖಾಂತರ.
6. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ಹೆಚ್ಚುವರಿ ಪ್ರತಿ: ರಕ್ಷಾ ಕಡತ.